

## ಅಲ್ಲಲ್ಲಿ ಬೆಳಕಿನ ಕಿರಣ

ಲೈಂಗಿಕ ಅಲ್ಪಸಂಖ್ಯಾತರೊಬ್ಬರಿಗೆ ಉದ್ಯೋಗ ನೀಡುವಂತೆ ವಿಧಾನ ಪರಿಷತ್ತಿಗೆ ಹೈಕೋರ್ಟ್ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ, 2021ರಲ್ಲಿ ಲಿಂಗ ಪರಿವರ್ತಿತ ಮೋನಿಷಾ (ರಾಮು) ಎನ್ನುವವರು 'ಡಿ' ಗ್ರೂಪ್ ಹುದ್ದೆಗೆ ನೇಮಕ ಆಗಿದ್ದರು. ತೆಲಂಗಾಣದಲ್ಲಿ ಲೈಂಗಿಕ ಅಲ್ಪಸಂಖ್ಯಾತ ವೈದ್ಯರಿಬ್ಬರು ಸರ್ಕಾರಿ ಉದ್ಯೋಗ ಗಳಿಸಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತರಿಗೆ 'ಮೈತ್ರಿ' ಯೋಜನೆಯಡಿ 2014ರಲ್ಲಿ ರಾಜ್ಯ ಸರ್ಕಾರ ಮಾಸಾಶನವನ್ನು ನೀಡುತ್ತಿದೆ. ತಮಿಳುನಾಡು ಸರ್ಕಾರ 2014ರಲ್ಲಿ ಎಸ್. ಸೆಲ್ವಿ ಸಂತೋಸಂ ಮತ್ತು ಎಸ್. ನೀಯಾ ಜೋಸೆಫ್ ಎನ್ನುವ ಲೈಂಗಿಕ ಅಲ್ಪಸಂಖ್ಯಾತರಿಗೆ ಸರ್ಕಾರಿ ನೌಕರಿ ನೀಡಿತ್ತು. ದೇಶದಲ್ಲಿಯೇ ಮೊದಲ ಬಾರಿಗೆ ರಾಜ್ಯ ಹೈಕೋರ್ಟ್, ಅನು ಎಂಬ ಲಿಂಗಪರಿವರ್ತಿತ ಮಹಿಳೆಗೆ ಉದ್ಯೋಗ ನೀಡಿತ್ತು. ಇದರ ಮುಂದುವರಿದ ಭಾಗ ಎಂಬಂತೆ, ರಾಜಕೀಯ ಪ್ರಾತಿನಿಧ್ಯದ ಧ್ವನಿ ಕೂಡ ಆ ಸಮುದಾಯದ ನಡುವಿನಿಂದ ಮೊಳಗುತ್ತಿದೆ. ಕೆಲವರ್ಷಗಳ ಹಿಂದೆ 'ಸಾಲಿಡಾರಿಟಿ ಫೌಂಡೇಷನ್' ಎಂಬ ಸಂಸ್ಥೆ ಟ್ರಾನ್ಸ್‌ಜೆಂಡರ್‌ಗಳಿಗೆ ರಾಜಕೀಯ ನಾಯಕತ್ವ ಬೆಳೆಸುವ ಸಂಬಂಧ ಬೆಂಗಳೂರಿನಲ್ಲಿ ತರಬೇತಿ ನೀಡಿತ್ತು.

